ನೋಡುವಂತಿದ್ದರೂ... ಆಕೆಯ ವಿಪರೀತ ಸ್ಟೈಲ್‌ನಿಂದಾಗಿ ಇದ್ಯಾವುದೋ ಹೈಸ್ಪೀಡ್ ಗಾಡಿ ನಮಗೆ ಹೊಂದುವಂತಹದ್ದಲ್ಲ, ಯಾವುದೋ ಫ್ಯೂಡಲ್ ಮನೆತನದ್ದಿರಬೇಕೆಂಬ ಹುಳಿದ್ರಾಕ್ಷಿ ನಿಲುವಿಗೆ ಬಂದಿದ್ದ.

ಕಾಲೇಜು ಶುರುವಿನಲ್ಲೆ ದೇಶವ್ಯಾಪಿ ಹತ್ತಿ ಉರಿದ ದಲಿತ ವಿದ್ಯಾರ್ಥಿಯೊಬ್ಬಳ ಅತ್ಯಾಚಾರ ಮತ್ತು ಕೊಲೆ ಸಂಬಂಧ ನಡೆದ ಪ್ರತಿಭಟನೆ ಯೂನಿವರ್ಸಿಟಿಯಲ್ಲೂ ನಡೆಯಿತು. ತನ್ನ ಹಾಸ್ಟೆಲ್ ಗೆಳೆಯರೊಂದಿಗೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬಂದ ನಟನಿಗೆ ಅಲ್ಲಿ ಆಶ್ಚರ್ಯ ಕಾದಿತ್ತು. 'ಶೇಮ್ ದಿಸ್ ಕೇಸರಿ ಗೌರ್ಮೆಂಟ್' ಎಂದು ಕೂಗುತ್ತಿದ್ದವಳು ಇದೇ ಜೀನ್ಸ್‌ಧಾರಿ ಲಲಿತಾ. ನಟ ಅಂದು ತಾನು ಕೂಗಿದ್ದಕ್ಕಿಂತ ಅವಳ ಲಿಪ್‌ಸ್ಟಿಕ್ ತುಟಿಗಳು ಅಲುಗಾಡುತ್ತಿದ್ದುದನ್ನ ನೋಡಿದ್ದೆ ಹೆಚ್ಚು. ಅಂದಿನಿಂದ ಲಲಿತಾಳ ಮೇಲಿದ್ದ ಎಲ್ಲ ಪೂರ್ವಗ್ರಹಗಳು ಒಮ್ಮೆಲೆ ಕರಗಿ ಅವಳ ಮೇಲೆ ವಿಶೇಷ ಆಸಕ್ತಿ ಬೆಳೆಸಿಕೊಂಡ. ಒಮ್ಮೆ ತರಗತಿಯಲ್ಲಿ ಮುಂದುಗಡೆ ಬೆಂಚ್‌ನಲ್ಲಿದ್ದ ಇಂಟಲಿಜೆಂಟ್ ಚಕ್ರವರ್ತಿ 'ಇನ್ನೆಷ್ಟು ದಿನ ಮೀಸಲಾತಿ' ಎಂದು ಔಟ್ ಆಫ್ ಸಿಲೆಬಸ್ ಒಂದನ್ನು ಎಳೆದುತಂದು ತರಗತಿಗೆ ಬಿಟ್ಟು ಗೇಲಿಗಿಳಿದಿದ್ದ. ತನ್ನಂತೆಯೇ ಹಾಸ್ಟೆಲ್‌ನಲ್ಲಿ ಉಂಡು ಬರುತ್ತಿದ್ದ ಸಹಪಾಠಿಗಳು ಅವನ ಹಾವಭಾವವನ್ನೆ ಮಂಗನಂತೆ ನೋಡುತ್ತಿದ್ದಾಗ ಗೂಳಿಯಂತೆ ನುಗ್ಗಿ ಅವನಿಗೆ ಈ ದೇಶದಲ್ಲಿ ಶತಶತಮಾನಗಳಿಂದ ಮೀಸಲು ಪಡೆದುಕೊಂಡು ಬರುತ್ತಿರುವವರು ಯಾರು ಎಂಬುದನ್ನು ಪುರಾವೆ ಸಮೇತ ಮುಂದಿಟ್ಟು ಚಕ್ರವರ್ತಿಯ ಅಂಡು ಸುಡುವಂತೆ ಮಾಡಿದ್ದ. ಈ ಚರ್ಚೆಯ ಮಧ್ಯೆ ಒಂದು ಹೆಣ್ಣು ಆಗಿಂದ್ದಾಗೆ ನಟನಿಗೆ ಸಪೋರ್ಟಿವ್ ಆಗಿ ತನ್ನ ದನಿಯನ್ನೂ ಸೇರಿಸುತ್ತಿತ್ತು. ಚರ್ಚೆಯ ತೀವ್ರತೆಯಲ್ಲಿ ಅತ್ತಕಡೆ ಅಷ್ಟಾಗಿ ಗಮನಕೊಡದಿದ್ದರೂ ಇದು ಲಲಿತಾಳದ್ದೆ ದನಿ ಎಂಬುದು ಗೋಚರಕ್ಕೆ ಬರುತ್ತಿತ್ತು. ಅಂದಿನ ಕ್ಲಾಸ್ ಮುಗಿದ ಮೇಲೆ ಕೆಲ ಹುಡುಗರು, 'ಚೆನ್ನಾಗಿ ಬೆವರು ಇಳಿಸ್ದೆ ಕಣಮ್ಮ ಆ ನನ್ಮಗನಿಗೆ' ಎಂದು ಕೈ ಕುಲುಕುತ್ತಿದ್ದರೆ, ಅತ್ತಕಡೆಯಿಂದ ಬಂದ ಜೀನ್ಸ್‌ಧಾರಿ ಲಲಿತಾ 'ತುಂಬಾ ಚೆನ್ನಾಗಿ ಆರ್ಗ್ಯೂ ಮಾಡಿದ್ರಿ, ಹೀಗೆ ಬುದ್ಧಿ ಕಲಿಸ್ಬೇಕು' ಎಂದವಳೆ ಥ್ಯಾಂಕ್ಸ್ ಎನ್ನುತ್ತ ಕೈ ಮುಂದೆ ಮಾಡುವುದೆ! ನಟ ಅವಳ ತಂಪೆನಿಸುವ ಅಂಗೈಯೊಳಗೆ ತನ್ನ ಕೈ ಬೆಸೆದು ಅವಾಕ್ಕಾದ.

ಇನ್ನು, ರಾತ್ರಿ ಹಗಲೂ ಅವಳ ಕನವರಿಕೆಯೇ. ಕಾಲೇಜಿಗೆ ಬಂದನೆಂದರೆ ಅವಳಿಗಾಗಿಯೇ ಹುಡುಕಾಡುವ ಕಣ್ಣುಗಳು, ಎಲ್ಲೆಂದರಲ್ಲಿ ನಿಯಂತ್ರಣ ತಪ್ಪಿ ತಿರುಗುವ ಪಾದಗಳು. ವಿಚಿತ್ರವೆಂದರೆ, ನಟ ಅವಳಿಗಾಗಿ ಅತ್ತ ತಿರುಗಿದರೆ ಅವಳೂ ಇವನನ್ನೆ ನೋಡುತ್ತಿರುವುದೆ!

ಪರಿಣಾಮವಾಗಿ, ಮೊದಲ ವರ್ಷದ ಫಸ್ಟ್ ಸೆಮ್ ಮುಗಿಯುವಷ್ಟರಲ್ಲಿ ಇವರಿಬ್ಬರ ನಡುವೆ ಒಂದು ವೈಚಾರಿಕ ಸ್ನೇಹ ಬೆಳದೇ ಬಿಟ್ಟಿತು. ನಟನ ಸ್ನೇಹವಾದ ಮೇಲೆ ಲಲಿತಾ ಕೆಲವೊಮ್ಮೆ ತಾನು ತರುತ್ತಿದ್ದ ಸ್ಕೂಟಿಯನ್ನು ಸೈಡಿಗೆ ಹಾಕಿ, ಇಬ್ಬರೂ ಜೊತೆಯಾಗಿ ಕ್ಯಾಂಪಸ್ ತುಂಬ ಓಡಾಡತೊಡಗಿದರು. ಕ್ಯಾಂಪಸ್‌ನ ಆಡಿಟೋರಿಯಮ್‌ನಲ್ಲಿ ನಡೆಯುತ್ತಿದ್ದ ಸಾಹಿತ್ಯ ಗೋಷ್ಠಿಗಳಲ್ಲಿ, ಇಂಗ್ಲಿಷ್ ನಾಟಕಗಳ ಕನ್ನಡ

